# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | **440** |
| ಸದಸ್ಯರ ಹೆಸರು : | ಡಾ॥ ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ವಿಷಯ : | ಧಾರ್ಮಿಕ ಸಂಸ್ಥೆ ದೇವಾಲಯಗಳ ಜೀರ್ಣೋದ್ಧಾರ ಅರ್ಚಕರ ಕಲ್ಯಾಣ |
| ಉತ್ತರಿಸಬೇಕಾದ ದಿನಾಂಕ: | 12.12.2018 |
| ಉತ್ತರಿಸಬೇಕಾದ ಸಚಿವರ ಹೆಸರು : | ಗಣಿ ಮತ್ತು ಭೂ ವಿಜ್ಞಾನ ಹಾಗೂ ಮುಜರಾಯಿ ಸಚಿವರು |

| | **ಪ್ರಶ್ನೆ** | **ಉತ್ತರ** |
|---|---|---|
| ಅ) | ರಾಜ್ಯದ ಮುಜರಾಯಿ ಇಲಾಖೆಯಡಿ ಬರುವ ದೇವಾಲಯಗಳು ಹಾಗೂ ಧಾರ್ಮಿಕ ಸಂಸ್ಥೆಗಳ ಸಂಖ್ಯೆ ಎಷ್ಟು; ಅವುಗಳಿಂದ ಬರುತ್ತಿರುವ ಆದಾಯ ಎಷ್ಟು; ಅವುಗಳ ಜೀರ್ಣೋದ್ಧಾರಕ್ಕೆ ಹಾಗೂ ನಿರ್ವಹಣೆಗೆ ವ್ಯಯಿಸುತ್ತಿರುವ ಮೊತ್ತವೆಷ್ಟು; ಬಳಕೆಯಾಗದೆ ಉಳಿದಿರುವ ಹಣದ ಪ್ರಮಾಣವೆಷ್ಟು; ಈ ಹಣವನ್ನು ಹಿಂದೂ ಧಾರ್ಮಿಕೇತರ ಸಂಸ್ಥೆಗಳಿಗೆ ನೀಡಲಾಗಿದೆಯೇ; ನೀಡಲಾಗುತ್ತಿದೆಯೇ ಅಥವಾ ನೀಡುವ ಯೋಜನೆ ಇದೆಯೇ; | ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ **34,558** ಅಧಿಸೂಚಿತ ಸಂಸ್ಥೆಗಳು / ದೇವಾಲಯಗಳಿವೆ. ಸದರಿ ದೇವಾಲಯಗಳನ್ನು ಅವುಗಳ ಆದಾಯಕ್ಕೆ ಅನುಸಾರವಾಗಿ ಕೆಳಕಂಡಂತೆ ವರ್ಗೀಕರಿಸಲಾಗಿದೆ. |

| ಪ್ರವರ್ಗ | ವಿವರ | ಸಂಸ್ಥೆಗಳ ಸಂಖ್ಯೆ |
|---|---|---|
| ಎ | ವಾರ್ಷಿಕ ವರಮಾನವು ರೂ ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು | 192 |
| ಬಿ | ವಾರ್ಷಿಕ ವರಮಾನವು ರೂ ಐದು ಲಕ್ಷಗಳನ್ನು ಮೀರಿ ರೂ ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು | 151 |
| ಸಿ | ವಾರ್ಷಿಕ ವರಮಾನವು ರೂ ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು | 34215 |
| | ಒಟ್ಟು | **34,558** |

ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳ 2017–18ನೇ ಸಾಲಿನ ಆದಾಯ ಒಟ್ಟು **ರೂ.481.37 ಕೋಟಿಗಳು.**

| ಪ್ರವರ್ಗ | 2017–18 |
|---|---|
| | **ಮೊತ್ತ ರೂ ಕೋಟಿಗಳಲ್ಲಿ** |
| 'ಎ' | 459.19 |
| 'ಬಿ' | 22.18 |
| **ಒಟ್ಟು** | **481.37** |

ಸಮೂಹ 'ಸಿ' ಪ್ರವರ್ಗ ದೇವಾಲಯಗಳಿಗೆ ವಾರ್ಷಿಕ ಆದಾಯವು ತುಂಬಾ ಕಡಿಮೆಯಾಗಿರುತ್ತದೆ. ಈ ದೇವಾಲಯಗಳಿಗೆ ವಾರ್ಷಿಕ ತಸ್ತೀಕ್ ಮೊತ್ತ ರೂ.48,000/–ಗಳನ್ನು ನಿಗಧಿಪಡಿಸಲಾಗಿರುತ್ತದೆ.

ಮುಜರಾಯಿ ದೇವಾಲಯಗಳಿಂದ ಬರುವ ಆದಾಯವನ್ನು ಆಯಾಯ ದೇವಾಲಯಗಳ ಸಂಬಂಧಿಸಿದ ದೇವಾಲಯದ ಖಾತೆಯಲ್ಲಿ ಸಂಗ್ರಹಿಸಿ, ಆಯಾಯ ದೇವಾಲಯದ ನಿರ್ವಹಣೆಗೆ ನಿತ್ಯ ಕಟ್ಲೆ, ಭಕ್ತಾಧಿಗಳಿಗೆ ದಾಸೋಹ, ಹೆಚ್ಚು ಕಟ್ಲೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ ಕಾಮಗಾರಿಗಳು ಭಕ್ತಾಧಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಹಾಗೂ ದೇವಾಲಯದ ವತಿಯಿಂದ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ 1997ರ ಕಾಯ್ದೆಯ ಕಲಂ 36(1)ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತದೆ.

| | | |
|---|---|---|
| ಆ) | ಧಾರ್ಮಿಕ ಸಾಧು ಸಂತ, ಜ್ಯೋತಿಷಿಗಳಿಗೆ ಅವರ ಪಾಂಡಿತ್ಯ ಸಾಧನೆಯನ್ನು ಆಧರಿಸಿ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಇನ್ನಿತರೆ ಪುರಸ್ಕಾರಗಳನ್ನು ನೀಡಲಾಗಿದೆಯೇ: ನೀಡುವ ಅಲೋಚನೆ ಇದೆಯೇ: | ಧಾರ್ಮಿಕ ದತ್ತಿ ಇಲಾಖೆಗೆ ಸಂಬಂದಿಸಿದಂತೆ ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಇ) | ರಾಜ್ಯದ ವಿವಿಧ ಭಾಗಗಳಲ್ಲಿನ ಪ್ರಾಚೀನ ಐತಿಹಾಸಿಕ ಶಕ್ತಿ ಸ್ಥಳಗಲ್ಲಿರುವ ದೇವಸ್ಥಾನಗಳಲ್ಲಿನ ವಿಗ್ರಹ/ಮೂರ್ತಿ ಮತ್ತು ಆಭರಣಗಳನ್ನು ಕಳ್ಳಕಾಕರಿಂದ ರಕ್ಷಿಸಲು ಸೂಕ್ತ ಭದ್ರತಾ ವ್ಯವಸ್ಥೆಯನ್ನು ಮಾಡಲಾಗಿದೆಯೇ: | ಮುಜರಾಯಿ ಇಲಾಖಾ ವ್ಯಾಪ್ತಿಗೆ ಒಳಪಡುವ ದೇವಾಲಯಗಳಲ್ಲಿರುವ ವಿಗ್ರಹ/ಮೂರ್ತಿ ಮತ್ತು ಆಭರಣಗಳನ್ನು ಕಳ್ಳಕಾಕರಿಂದ ರಕ್ಷಿಸಲು ಭದ್ರತೆಗಾಗಿ ಸ್ಟ್ರಾಂಗ್ ರೂಮ್ ನಿರ್ಮಾಣ, ಬರ್ಗ್ಲರ್ ಅಲರಾಂ, ಸಿ.ಸಿ.ಟಿ ಅಳವಡಿಕೆ, ಸೆಕ್ಯೂರಿಟಿ ಏಜೆನ್ಸಿಗಳ ನೇಮಕ ಮುಂತಾದ ಇನ್ನಿತರ ಭದ್ರತಾ ವ್ಯವಸ್ಥೆಗಳನ್ನು ಅಗತ್ಯತೆಯ ಅನುಸಾರವಾಗಿ ಕಲ್ಪಿಸಲು ಸುತ್ತೋಲೆಗಳು ಹಾಗೂ ಅಧಿಕೃತ ಜ್ಞಾಪನಾಗಳನ್ವಯ ನಿರ್ದೇಶನ ನೀಡಲಾಗಿದೆ. |
| ಈ) | ಪುರೋಹಿತ ವರ್ಗಕ್ಕೆ ಸೇರಿದ ಸಕಲ ರೀತಿಯ ಜ್ಞಾನಾರ್ಜನೆ ಮಾಡಿ ಧಾರ್ಮಿಕ ಪರಂಪರೆಯ ರಕ್ಷಣೆ ಹಾಗೂ ಸಂಸ್ಕೃತಿ ರಕ್ಷಿಸುತ್ತಿರುವ ಅರ್ಚಕ ಸಮುದಾಯದ ಕಲ್ಯಾಣಕ್ಕೆ ಕೈಗೊಂಡಿರುವ ಯೋಚನೆಗಳೇನು: ಮುಜರಾಯಿ ಇಲಾಖೆಯಿಂದ ನೀಡಲಾಗುತ್ತಿರುವ ಅರ್ಚಕರ ಸಂಬಳವು ಜೀವನ ನಡೆಸಲು ಬೇಕಾದ ಕನಿಷ್ಠ ಪ್ರಮಾಣದಲ್ಲಿದೆಯೇ: ಇನ್ನಿತರೆ ಯಾವುದಾದರೂ ವಿಶೇಷ ಸವಲತ್ತುಗಳನ್ನು ಅವರಿಗೆ ಒದಗಿಸಲಾಗಿದೆಯೇ: | ಮುಜರಾಯಿ ದೇವಾಲಯಗಳಲ್ಲಿ ಕಾರ್ಯನಿರ್ವಹಸುತ್ತಿರುವ ಅರ್ಚಕರುಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ –1997 ಹಾಗೂ 2002ರ ನಿಯಮ 8(2)(i)ರ ಕೋಷ್ಟಕದಲ್ಲಿ ಅರ್ಚಕರುಗಳಿಗೆ "ಉಪಲಬ್ಧಗಳನ್ನು" ಅಧಿಸೂಚಿತ ಸಂಸ್ಥೆ/ಘೋಷಿತ ಸಂಸ್ಥೆಯ ವ್ಯವಸ್ಥಾಪನಾ ಸಮಿತಿಯು ನಿಯಮಿಸಲಾದ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟು ಅರ್ಚಕರು ಸ್ವೀಕರಿಸುವ ತಟ್ಟೆಕಾಸು ಮತ್ತು ಸೇವಾ ರುಸುಂನ್ನು ಗಮನದಲ್ಲಿರಿಸಿಕೊಂಡು ನಿರ್ಧರಿಸತಕ್ಕದ್ದು" ಎಂದಿರುತ್ತದೆ. ಇದಲ್ಲದೆ ದೇವಾಲಯಗಳಲ್ಲಿ ನಡೆಯುವ ವಿವಿಧ ಸೇವೆಗಳಲ್ಲಿ ಸೇವಾ ರುಸುಂ ಹಾಗೂ ತಟ್ಟೆಕಾಸು ಪಡೆಯುತ್ತಿದ್ದು, ಹೆಚ್ಚಿನ ಆದಾಯವಿರುವ ಕೆಲವು ದೇವಾಲಯಗಳ ಅರ್ಚಕರುಗಳಿಗೆ ಸರ್ಕಾರಿ ವೇತನ ಶ್ರೇಣಿ ಸಹ ನೀಡಲಾಗಿದೆ.<br>ಅಲ್ಲದೆ ಸ್ಥಳಾವಕಾಶ ಇರುವ ದೇವಾಲಯಗಳಲ್ಲಿ ಅರ್ಚಕರಿಗೆ ದೇವಸ್ಥಾನದ ಆವರಣದೊಳಗೆ ಅಥವಾ ದೇವಸ್ಥಾನದ ಹತ್ತಿರದಲ್ಲಿ ಬಾಡಿಗೆ ರಹಿತ ವಸತಿಯನ್ನು ಸಹ ಒದಗಿಸಲು ಅವಕಾಶ ಕಲ್ಪಿಸಿದೆ. ಜೊತೆಗೆ ಪೌರೋಹಿತ್ಯಕ್ಕೆ ಬೇಕಾಗುವ ಜ್ಞಾನಾರ್ಜನೆಗಾಗಿ ಇಲಾಖೆಯಿಂದ ಪ್ರತಿ ವರ್ಷ ಆಗಮ ಪ್ರವರ ಮತ್ತು ಪ್ರವೀಣ ಪ್ರಸಿದ್ಧ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. |

(ಸಂಖ್ಯೆ: ಕಂಇ 141 ಮುಸಪ್ರ 2018)

**ರಾಜಶೇಖರ.ಬಿ.ಪಾಟೀಲ**

(ಗಣಿ ಮತ್ತು ಭೂವಿಜ್ಞಾನ ಹಾಗೂ

ಮುಜರಾಯಿ ಸಚಿವರು)